ವಿಷಯ:–ಪುತ್ತೂರು ತಾಲ್ಲೂಕಿನ ಇದೇ ಗ್ರಾಮದಲ್ಲಿರುವ "ಬೇಂದ್ರತೀರ್ಥ"ದ ಬಗ್ಗೆ.

ಪ್ರಶ್ನೆಸಂಖ್ಯೆ.---617 (1275) ಶ್ರೀ ಎನ್. ಶಿವರಾವ್ (ಬಂಟ್ವಾಳ್).—ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ:

ಅ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಇರ್ದಿ ಗ್ರಾಮದ ಬಿಸಿ ನೀರಿನ ತೀರ್ಥ ಎಂಬ ಹೆಸರಿನಿಂದ ಪ್ರಸಿದ್ಧ ಸ್ಥಳವಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ;

ಆ. ಈ ಸ್ಥಳವನ್ನು ಪ್ರವಾಸಿ ಕೇಂದ್ರವನ್ನಾಗಿ ಪರಿವರ್ತಿಸುವ ವಿಚಾರ ಸರಕಾರದ ಮುಂದಿದೆಯೇ, ಹಾಗಾದಲ್ಲಿ ಅದನ್ನು ಅಭಿವೃದ್ಧಿಪಡಿಸಲಾಗುವುದೇ ?

ಶ್ರೀ ಎಂ. ರಘುಪತಿ (ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು).—

ಅ. ಹೌದು.

ಆ. 1983-48ನೇ ಸಾಲಿನಲ್ಲಿ ಉಳಿತಾಯದಲ್ಲಿ ಈ ಸ್ಥಳದಲ್ಲಿ ಪ್ರವಾಸಿಗರಿಗೆ ತಂಗುದಾಣ ಕಲ್ಪಿಸಲು 50,000ರೂ. ಗಳನ್ನು ಮಂಜೂರು ಮಾಡಲಾಗಿದೆ. ಅಲ್ಲದೆ, 1984-85ರ ಯೋಜನೆಯಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ, ವಸತಿ ಗೃಹ ಇತ್ಯಾದಿಗಳನ್ನು ಕಟ್ಟಲು 1 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಶ್ರೀ ಎಂ. ರಘುಪತಿ ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು.

ಶ್ರೀ ಎನ್. ಶಿವರಾವ್.---ಮಾನ್ಯ ಅಧ್ಯಕ್ಷರೇ 1983-84ನೇ ಸಾಲಿಗೆ ಒದಗಿಸಿದಂಥ ಹಣ 50 ಸಾವಿರ ರೂಪಾಯಿಗಳೆಂದು ಹೇಳಿರುತ್ತೀರಿ. ಈ ಹಣ ಖರ್ಚು ಮಾಡಲಾದೆಗಿಯೇ ? ಮತ್ತು ಯೋಚಿತ ರೀತಿಯಲ್ಲಿ ಪ್ರವಾಸಿಗರಿಗೆ ವಸತಿಗೃಹಗಳ ಸೌಕರ್ಯವನ್ನು ಕಲ್ಪಿಸಲಾಗಿದೆಯೇ? ಈ ಯೋಜನೆಯ ಒಟ್ಟು ವೆಚ್ಚ ಎಷ್ಟು? ಏನೇನು ಸೌಕರ್ಯಗಳನ್ನು ಕಲ್ಪಿಸಲು ಯೋಜನೆ ಮಾಡಿದ್ದೀರಿ ತಿಳಿಸಬೇಕು?

ಶ್ರೀ ಎಂ. ರಘುಪತಿ.---ಮಾನ್ಯ ಸಭಾಧ್ಯಕ್ಷರೇ ಈ ವಿಚಾರದಲ್ಲಿ ಮಾನ್ಯ ರಾಮಬಟ್ಟಿರವರು ಕಳೆದ ಅಧಿವೇಶನದಲ್ಲಿಯೇ ಪ್ರಶ್ನೆಯನ್ನು ಕೇಳಿದ್ದರು. ಆದರ ಬಗ್ಗೆ ಉತ್ತರವನ್ನು ಹೇಳಿದ್ದೇನೆ. ಮತ್ತು ಸ್ಥಳವನ್ನು ಪರಿಶೀಲನೆಮಾಡಿ ಆದರ ಪ್ರಕಾರ ಮತ್ತು ಜನತೆಯ ಒತ್ತಡದ ಮೇರೆಗೆ, ಭಾರತ ದೇಶದಲ್ಲಿ ಈ ರೀತಿ ಎರಡು ಜಾಗದಲ್ಲಿ ಬಿಸಿನೀರಿನ ಬುಗ್ಗೆ ಬರತಕ್ಕಂಥದು ಗೊತ್ತಾದಮೇಲೆ, ದಕ್ಷಿಣ ಕರ್ನಾಟಕ ಪುತ್ತೂರಿನ ಇರ್ದಿ ಗ್ರಾಮದಲ್ಲಿ ಒಂದು ಕೊಳವೆ ಬಾವಿಯನ್ನು ತೆಗೆದು ಅದನ್ನು ಸರಿಮಾಡುವು ದಕ್ಕಾಗಿ 50 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿರುತ್ತೇವೆ. ಮುಂದೆ ಒಂದು ಲಕ್ಷ ರೂಪಾಯಿ ಗಳನ್ನು ಖರ್ಚುಮಾಡಿ ಒಂದು ಸಣ್ಣದಾದ ಕುಠೀರವನ್ನು ಕಟ್ಟಬೇಕೆಂದು ಇದ್ದೇವೆ. ಮುಂಬರುವ ವರ್ಷ ಗಳಲ್ಲಿ 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದೂ ಕೂಡ ಯೋಜನೆಯನ್ನು ಇಟ್ಟು ಕೊಂಡಿದ್ದೇವೆ.

ವಿಷಯ:— ಉದ್ಯೋಗ ತರಬೇತಿ ವಿಭಾಗದ ಕಛೇರಿಯನ್ನು ಮಂಗಳೂರಿನಿಂದ ಮೈಸೂರಿಗೆ ವರ್ಗಾಯಿಸುವುದು.

ಪ್ರ. 618(1429) ಡಾ॥ ವಿ. ಎಸ್. ಆಚಾರ್ಯ (ಉಡುಪಿ).—ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:—

ಅ. 1975 ರಿಂದಲೂ ಮಂಗಳೂರಿನಲ್ಲಿದ್ದ ನಿರುದ್ಯೋಗದಲ್ಲಿರುವ ಯುವಕರಿಗೆ ಉದ್ಯೋಗ ತರ ಬೇತಿ (ಅಪ್ರೆಂಟಿಶಿಪ್) ನೀಡುವ ವಿಭಾಗಾ ಕಛೇರಿಯನ್ನು ಮೈಸೂರಿಗೆ ವರ್ಗಾಯಿಸುವ ವಿಚಾರವೇನಾದರೂ ಸರ್ಕಾರದವರ ಮುಂದೆ ಇದೆಯೇ ;

ಆ. ಹೀಗೆ ಈ ವಿಭಾಗಾ ಕಛೇರಿ ವರ್ಗಾವಣೆಯಾದರೆ ಭಾರೀ ಸಂಖ್ಯೆಯಲ್ಲಿರುವ ವಿದ್ಯಾವಂತ ನಿರುದ್ಯೋಗಿಗಳು ಉದ್ಯೋಗ ತರಬೇತಿ ಪಡೆಯುವುದರಿಂದ ವಂಚಿತರಾಗುವುದಿಲ್ಲವೇ ;

ಇ. ಹಾಗಿದ್ದಲ್ಲಿ ಸರ್ಕಾರದವರು ಈ ವಿಭಾಗವನ್ನು ಇನ್ನಷ್ಟು ಸಮೃದ್ಧವಾಗಿ ಮಂಗಳೂರಲ್ಲೇ ಕಾರ್ಯ ನಿರ್ವಹಿಸುವಂತೆ ವ್ಯವಸ್ಥೆ ಮಾಡುವರೆ ?

ಶ್ರೀ ಅಜೀಜ್ ಸೇಠ್ (ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು).—

ಅ. ಹೌದು.

ಆ. ಇಲ್ಲ. ಆಡಳಿತಾತ್ಮಕ ದೃಷ್ಟಿಯಿಂದ ಮಾತ್ರ ಮಂಗಳೂರಿನಲ್ಲಿರುವ ವಿಭಾಗೀಯ ಕಛೇರಿಯನ್ನು ಮೈಸೂರಿಗೆ ವರ್ಗಾಯಿಸಲು ಯೋಚಿಸಲಾಗಿದೆ. ಇದರಿಂದ ಮಂಗಳೂರು (ದಕ್ಷಿಣ ಕನ್ನಡ) ಅಥವಾ ಮಂಗಳೂರು ವಿಭಾಗದ ಯಾವ ಜಿಲ್ಲೆಗಳಿಗೂ ಏನು ಪರಿಣಾಮ ಉಂಟಾಗಲಾರದು.

ಇ. ಇದು ಉದ್ಭವಿಸುವುದಿಲ್ಲ. ಈಗ ಮಂಗಳೂರು, ಮಂಗಳೂರು ವಿಭಾಗದ ಮುಖ್ಯ ಕಛೇರಿಯಾಗಿದ್ದ ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಈ ಐದು ಜಿಲ್ಲೆಗಳನ್ನೊಳಗೊಂಡಿದೆ. ಈ ಇಲಾಖೆಯ ಶಿಕ್ಷಣ ತರಬೇತಿ ವಿಭಾಗದ ಪುನರ್ ವ್ಯವಸ್ಥಿತ ವಿಭಾಗೀಯ ಕಛೇರಿಗಳ ಯೋಜನೆಯಲ್ಲಿ ಹೊಸದಾಗಿ ಇನ್ನೆರಡು ವಿಭಾಗೀಯ ಕಛೇರಿಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ಈ ಸಂಬಂಧದಲ್ಲಿ ಮಂಗಳೂರು ವಿಭಾಗೀಯ ಕಛೇರಿಯ ವ್ಯಾಪ್ತಿಗೆ ಸೇರಿದ ಮೈಸೂರು, ಮಂಡ್ಯ, ಚಿಕ್ಕ ಮಗಳೂರು, ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗಳನ್ನು ಮಂಗಳೂರು ಸೇರಿದಂತೆ ಆಡಳಿತಾತ್ಮಕ ಹಾಗೂ ಶಿಕ್ಷಣ ತರಬೇತಿ ಯೋಜನೆಯ ಉನ್ನತಿ ಮತ್ತು ಹಿತದೃಷ್ಟಿಯಿಂದ ಮೈಸೂರಿಗೆ ವರ್ಗಾಯಿಸಲು ಯೋಜಿಸಲಾಗಿದೆ.

ಡಾ॥ ವಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಬಹಳ ವಿಚಿತ್ರವಾದಂಥ ಉತ್ತರವನ್ನು ಕೊಟ್ಟಿದ್ದಾರೆಂದು ಹೇಳಬೇಕಾಗುತ್ತದೆ. ಏಕೆಂದರೆ, ಹೊಸದಾಗಿ ಇನ್ನೆರಡು ವಿಭಾಗೀಯ ಕಛೇರಿಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ ಎಂದು ಒಂದು ಕಡೆ ಹೇಳಿದರೆ ಮತ್ತೊಂದು ಕಡೆ ಮಂಗಳೂರಿನಲ್ಲಿರುವ ವಿಭಾಗಾ ಕಛೇರಿಯನ್ನು ಮೈಸೂರಿಗೆ ವರ್ಗಾಯಿಸಲಾಗುವುದೆಂದು ಹೇಳಿದ್ದಾರೆ. ಇದರಿಂದ ಭಾರೀ ಸಂಖ್ಯೆಯಲ್ಲಿರುವ ವಿದ್ಯಾವಂತ ನಿರುದ್ಯೋಗಿಗಳು ಉದ್ಯೋಗ ತರಬೇತಿ ಪಡೆಯಲು ತೊಂದರೆಯಾಗುವುದಿಲ್ಲವೇ ? ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಾತನಾಡುವಂತಹ ಈ ಸರ್ಕಾರದವರು ಈ ರೀತಿ ಉತ್ತರ ಕೊಡುವುದು ಸರಿಯೇ ? ಈಗ ಮಂಗಳೂರಿನಲ್ಲಿರುವ ವಿಭಾಗಾ ಕಛೇರಿಯನ್ನು ಮೈಸೂರಿಗೆ ವರ್ಗಾವಣೆಮಾಡುವುದಿಲ್ಲವೆಂದು ಮಾನ್ಯ ಮಂತ್ರಿಗಳು ಭರವಸೆ ಕೊಡುತ್ತಾರೆಯೇ ?

SriAziz Sait.—My friend Sri Acharya will bear with me. This scheme is growing with the implementation of the Apprenticeship Act of 1961. The number of establishments has increased from 500 to 1200. The number of trainee seats has gone up from 3000 to 9000 But onaccount of the inadequate administrative machinery. it has not been possibe to tap t tle fullet opntial of the Industries to implement the Act. There isnothing ethat we have against Mangalore. From administration point of vieh we are taking the administrative office only to Mysore. I assure ewhon. Member that there will be no difficulties on account of this. If there are any difficulties, I will see that no hardship is caused if they are brought to my notice. Let us not make this a regional issue. After all it is in the State. I am equally interested in it. I appreciate Mangalore people. They arh adventurous and good people.

Dr. V. S. Acharya.—Perhaps he invites adventurism on our part to retain that Division in Mangalore. ಏಕೆಂದರೆ, ವಿದ್ಯಾವಂತ ನಿರುದ್ಯೋಗಿಗಳಿಗೆ ನಾನಾ ವಿಷಯಗಳಲ್ಲಿ ತರಬೇತಿ ಕೊಡಲಾಗುತ್ತಿದೆ. ಇಲ್ಲಿ ತರಬೇತಿ ಪಡೆದವರಿಗೆ ಭತ್ಯವನ್ನು ಕಾಲಕ್ಕೆ ಸರಿಯಾಗಿ ಕೊಡುತ್ತಿಲ್ಲ. ಅನೇಕ ಸಲ ಪತ್ರ ವ್ಯವಹಾರ ಮಾಡಬೇಕಾಗಿದೆ. ರೀಇಂಬರ್ಸ್‌ಮೆಂಟ್ ಕಾಲಕ್ಕೆ ಸರಿಯಾಗಿ ಬರುತ್ತಿಲ್ಲ. ಇನ್ನು ಈ ವಿಭಾಗ ಕಛೇರಿಯನ್ನು ಮೈಸೂರಿಗೆ ವರ್ಗಾವಣೆ ಮಾಡಿ ಈ ಸ್ಕೀಮನ್ನು ಕ್ರಮಬದ್ಧವಾಗಿ ನಿರ್ವಾಮ ಮಾಡುತ್ತೀರಾ ಎಂದು ತಮ್ಮನ್ನು ನಾನು ಕೇಳಬೇಕಾಗಿದೆ ?

Sri Aziz Sait.—Mr. Acharya is a very experienced man. He is very close to scientific approach as a doctor. He will appreciate that when this Government took over there were only three Divisions. Now there are five diuisions at Bangalore. Davonagere, Hubli, Gulbarga and Mysore. Regarding reimbursement, I assure that there will be no delay. Just bring to my notice and I will solve it. But for administrative purposes, Mr. Acharya must co-operate with us,

ಶ್ರೀ ಕೆ. ರಾಮಭಟ್.—ನಮ್ಮ ದಕ್ಷಿಣ ಕನ್ನಡ ಜಿಲ್ಲೆಯನ್ನು ಹೊಗಳಿಹೊಗಳಿ ಈಗ ಅಲ್ಲಿರುವ ಈ ವಿಭಾಗ ಕಛೇರಿಯನ್ನು ಆಡಳಿತಾತ್ಮಕ ದೃಷ್ಟಿಯಿಂದ ಎಂಬ ಕಾರಣ ಕೊಟ್ಟು ಮೈಸೂರಿಗೆ ವರ್ಗ ಮಾಡುತ್ತಿದ್ದೀರಿ. ಆಡಳಿತಾತ್ಮಕ ದೃಷ್ಟಿ ಎಂದರೆ ಏನು ? ಈ ಬಗ್ಗೆ ಸ್ವಲ್ಪ ವಿವರಣೆ ಕೊಡುತ್ತೀರಾ ?

ಅಧ್ಯಕ್ಷರು.— ಈ ಎರಡೂ ಕಡೆ ಬಿಟ್ಟು ಚಿಕ್ಕಮಗಳೂರಿನಲ್ಲಿ ಮಾಡಿದರೆ ಹೇಗೆ ?

ಶ್ರೀ ಜೆ. ಡಿ. ಸೋಮಪ್ಪ.— ಹಾಸನಕ್ಕೆ ಕೊಟ್ಟರೆ ಇನ್ನೂ ಹಿಳ್ಳಿಯದಾಗುತ್ತದೆ.

Sri Azaiz Sait.—Historically also we are vary close, I need not define 'administration'. Mysore has got a good environment, Chamundi hill background and is at an approachable distance from all these Districts.

ಡಾ॥ ವಿ. ಎಸ್. ಆಚಾರ್ಯ.—ರೀ ಇಂಬರ್ಸ್‌ಮೆಂಟ್ ಕೂಡಲೇ ಆಗುತ್ತಿಲ್ಲವೆಂಬ ದೂರನ್ನು ಕೇಳಿ ಕೇಳಿ ಸಾಕಾಗಿದೆ. ಇಂಥಾದ್ದರಲ್ಲಿ ಅಲ್ಲಿರುವ ವಿಭಾಗ ಕಛೇರಿಯನ್ನು ಮೈಸೂರಿಗೆ ವರ್ಗಾವಣೆ ಮಾಡುವುದು ಸರಿಯಲ್ಲ. ಈ ಕಛೇರಿಯನ್ನು ಅಲ್ಲಿಯೇ ಉಳಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಅಜೀಜ್ ಸೇಠ್.—ಏನಾದರೂ ರೀ-ಇಂಬರ್ಸ್ ಆಗದಿದ್ದರೆ ನಾನು 24 ಗಂಟೆಗಳೊಳಗಾಗಿ ಮಾಡಿಸುತ್ತೇನೆ. But administration should be left to us.

ವಿಷಯ :- ಸಿಮೆಂಟ್ ದಾಸ್ತಾನಿನ ಬಗ್ಗೆ

ಪ್ರ, 619 (1493) ಶ್ರೀ ಕೆ.ಜಿ. ಶ್ರೀನಿವಾಸಮೂರ್ತಿ (ಸಾತನೂರು).—ಮಾನ್ಯ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಸಿಮೆಂಟ್ ದಾಸ್ತಾನುಗಾರರ ಹಾಗೂ ಮಾರಾಟಗಾರರ ಸಂಖ್ಯೆ ಎಷ್ಟು (ತಾಲ್ಲೂಕುವಾರು ದಾಸ್ತಾನುಗಾರರ ವಿಳಾಸಗಳು ಮತ್ತು ಲೈಯಿಸೆನ್ಸ್ ನಂಬರುಗಳನ್ನು ತಿಳಿಸುವಿರಾ) ;

ಆ. 1983ನೆಯ ಜನವರಿ ತಿಂಗಳಿನಿಂದ 1984ನೆಯ ಜನವರಿವರೆವಿಗೆ ಪ್ರತಿ ದಾಸ್ತಾನುಗಾರರಿಗೆ ಎಷ್ಟು ಪ್ರಮಾಣದ ಸಿಮೆಂಟ್ ಮಾರಾಟ ಮಾಡಲು ಪರವಾನಿಗೆ ಕೊಡಲಾಗಿದೆ ;

ಇ. ಗ್ರಾಮಾಂತರ ಪ್ರದೇಶದಲ್ಲಿ ಸಿಮೆಂಟ್ ದೊರೆಯದೆ ಜನರಿಗೆ ತೊಂದರೆಯಾಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

ಈ. ಹಾಗಿದ್ದಲ್ಲಿ ಈ ತೊಂದರೆಯನ್ನು ಪರಿಹರಿಸಲು ಸರಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕೈಗಾರಿಕಾ ಸಚಿವರು) :—

ಅ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 96 ಲೆವಿ ಮತ್ತು 41 ನಾನ್‌ಲೆವಿ ಸಿಮೆಂಟ್ ಮಾರಾಟಗಾರರು ಇದ್ದಾರೆ.

ಆ. ಅವರ ಲೈಸೆನ್ಸ್ ನಂ. ವಿಳಾಸ ಹಾಗೂ ಅವರಿಗೆ ಜನವರಿ 1983ರಿಂದ ಜನವರಿ 1984ರ ವರೆಗೆ ಕೊಡಲಾದ ಸಿಮೆಂಟಿನ ಪರಿಮಾಣದ ತಾಲ್ಲೂಕುವಾರು ವಿವರಗಳನ್ನು ಒದಗಿಸುವ ಎರಡು ಪಟ್ಟಿಗಳನ್ನು ಲಗತ್ತಿಸಲಾಗಿದೆ.